**<u>ದಿನಾಂಕಃ 06-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ. ಜೆ ಪಿ ವಕೀಲರಿಂದಃ-</u>**

1. ತಮ್ಮ ತಾತ ಜಮೀನನ್ನು ಖರೀದಿ ಮಾಡಿದ್ದಾರೆ ಎಂದು ಈ ಹಿಂದೆ ತಮ್ಮ ಪಾಟೀ ಸವಾಲಿಗೆ ಒಳಪಡಿಸಿದಾಗ ತಾವು ಹೇಳಿದ್ದು ಎಷ್ಟು ಖರೀದಿ ಮಾಡಿದ್ದಾರೆ ಎಂದು ಕೇಳಲಾಗಿ ಸಾಕ್ಷಿ ತನ್ನ ತಾತ ಬೋರ 6 ಎಕರೆ 33 ಗುಂಟೆ ಜಮೀನನ್ನು 1932ರಲ್ಲಿ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ತಮ್ಮ ತಾತ ತಾವು ಈ ಮೇಲೆ ಹೇಳಿದಂತೆ ಜಮೀನನನ್ನು ಖರೀದಿಸಿದ್ದಾರೆ ಎಂದು ಹೇಳಿದ್ದು ಈ ಬಗ್ಗೆ ಋಣಭಾರ ಪತ್ರ / ಇಸಿ ಹಾಜರುಪಡಿಸಿದ್ದೀರಾ ಎಂದರೆ ಹೌದು ಎನ್ನುತ್ತಾರೆ. 1932ರಲ್ಲಿ ತಮ್ಮ ತಾತ ಸ ನಂ.12ರಲ್ಲಿ 6 ಎಕರೆ 33 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದು ಹೇಳಿದ್ದು ಯಾರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಮೂಲ ಖಾತೆದಾರರಾದ ಯಾಲಕ್ಕಿ ಎಂಬುವವರಿಂದ ಖರೀದಿ ಮಾಡಿರುತ್ತಾರೆ ಎನ್ನುತ್ತಾರೆ. ತಮ್ಮ ತಾತನ ಹೆಸರಿಗೆ 6 ಎಕರೆ 33 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಖಾತೆ ಪಹಣಿ ಬಂದಿದೆಯಾ ಎಂದರೆ ಸಾಕ್ಷಿ ಹಿಂದೆ ಬಂದಿತ್ತು ಎನ್ನುತ್ತಾರೆ.

2. ತಮ್ಮ ತಾತನ ಹೆಸರಿಗೆ ಖಾತೆ ಪಹಣಿ ಬಂದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ತಮ್ಮ ತಂದೆ ಅದೇ ಸರ್ವೇ ನಂ.12ರಲ್ಲಿ ಯಾವುದಾದರೂ ಆಸ್ತಿಯನ್ನು ಖರೀದಿ ಮಾಡಿದ್ದಾರಾ ಎಂದರೆ ಸಾಕ್ಷಿ ಖರೀದಿ ಮಾಡಿದ್ದಾರೆ ಎನ್ನುತ್ತಾರೆ. ತಮ್ಮ ತಂದೆ ಯಾರಿಂದ ಸರ್ವೇ ನಂ.12ರಲ್ಲಿ ಜಮೀನನ್ನು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಬಸವೇಗೌಡ ಬಿನ್ ಬಸವೇಗೌಡ ಎಂಬುವವರಿಂದ ಎನ್ನುತ್ತಾರೆ. ಎಷ್ಟು ವಿಸ್ತೀರ್ಣ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಪೂರ್ವ-ಪಶ್ಚಿಮ ಒಂಭತ್ತುವರೆ ಗಜ, ಉತ್ತರ-ದಕ್ಷಿಣ 16 ಗಜ ಎನ್ನುತ್ತಾರೆ. ನಿಡಿ-1

ದಾಖಲೆಯಲ್ಲಿ ಇರುವ ಒಕ್ಕಣೆಯನ್ನು ಓದಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿದ್ದೇನೆ ಎನ್ನುತ್ತಾರೆ. ನಿಡಿ-1ರ ದಾಖಲೆಯ ಮೊದಲನೇ ಪುಟದ ಕೊನೆಯ ಮೂರು ಸಾಲುಗಳನ್ನು ಮತ್ತು 2ನೇ ಪುಟದ ಸಾಲುಗಳನ್ನು ಓದುವಿರಾ ಎಂದು ಕೇಳಿದಾಗ ಸಾಕ್ಷಿ ಓದುತ್ತೇನೆ ಎಂದು ಹೇಳಿ ಓದಿರುತ್ತಾರೆ.

3. ನಿಡಿ-1ರಲ್ಲಿ ನಮೂದಿಸಿರುವಂತೆ ಪೂರ್ವ ಪಶ್ಚಿಮ 36 ಮೊಳ, ದಕ್ಷಿಣೋತ್ತರ 33 ಮೊಳ ಮಾತ್ರ ಎಂದರೆ ಸರಿಯಲ್ಲ. ನಿಡಿ-4 ರಿಂದ 7 ಕಂದಾಯ ರಶೀದಿಗಳಲ್ಲಿ ಬೇರೆ ಬೇರೆ ಹಸ್ತಾಕ್ಷರ ಇದ್ದು ಸದರಿ ದಾಖಲೆಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಕಂದಾಯದ ರಶೀದಿಗಳು ಮನೆ ಆಸ್ತಿಗೆ ಕಟ್ಟಿದ ರಶೀದಿಗಳು ಎಂದರೆ ಸಾಕ್ಷಿ ಮನೆ ಜಮೀನಿನಲ್ಲಿ ಇದೆ ಆಗಾಗಿ ಮನೆಗೆ ಕಂದಾಯ ಕಟ್ಟಿದ್ದೇನೆ ಎನ್ನುತ್ತಾರೆ. ಮನೆಗೆ ಕಟ್ಟಿದ್ದ ಕಂದಾಯ ರಶೀದಿಗಳನ್ನು ಉದ್ದೇಶ ಪೂರ್ವಕವಾಗಿ ದಾವಾ ಆಸ್ತಿಗೆ ಸೇರಿಸಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿಡಿ-10 ದಾಖಲೆ ಪ್ರಕಾರ ಆರ್ ಎ 762/2017-18 ರಲ್ಲಿ ಈ ದಾವೆಯ ವಾದಿ ಪಕ್ಷಗಾರನಲ್ಲ ಎಂದರೆ ಸರಿ.

4. ದಾವಾ ಸ್ವತ್ತಿಗೂ ಮತ್ತು ನಾನು ಹಾಜರುಪಡಿಸಿರುವ ದಾಖಲೆಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ವಾದಿ ಪರ ವಕೀಲರು ಎಂ ಆರ್ 9/1999-2000 ದಾಖಲೆಯನ್ನು ತೋರಿಸಿ ದಾವಾ ಸ್ವತ್ತು ವಾದಿಯ ಹೆಸರಿಗೆ ಖಾತೆ ಇದೆ ಎಂದು ತೋರಿಸಿ ಕೇಳಲಾಗಿ ಸಾಕ್ಷಿ ನೋಡಿ ಹೌದು ಎಂದು ನುಡಿದು ಅಕ್ರಮವಾಗಿ ವಾದಿ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. **ಸದರಿ ಎಂ ಆರ್ ಪ್ರತಿಯನ್ನು ವಾದಿ ಪರ ನಿಪಿ-1 Confront ಮಾಡುವ ಮೂಲಕ ಗುರುತಿ**ಸಲಾಯಿತು. ದಾವಾ ಸ್ವತ್ತನ್ನು ವಾದಿ ಹೆಸರಿಗೆ ಖಾತೆ ಮಾಡಿಸಿಕೊಂಡಿರುವುದು ಯಾವಾ ಗೊತ್ತಾಯಿತು ಎಂರದೆ ಸಾಕ್ಷಿ 5-6 ವರ್ಷಗಳ ಹಿಂದೆ ಗೊತ್ತಾಯಿತು ಎನ್ನುತ್ತಾರೆ. ವಾದಿಗೆ ಆಗಿರುವ ಎಂ ಆರ್ 9/1999-2000 ಖಾತೆಯನ್ನು ರದ್ದುಗೊಳಿಸಲು ಸಕ್ಷಮ ಪ್ರಾಧಿಕಾರದ ಮುಂದೆ ಅರ್ಜಿ ಹಾಕಿದ್ದೀರಾ

ಎಂದರೆ ಸಾಕ್ಷಿ 2014ರಲ್ಲಿ ಅಪೀಲು ಮಾಡಿದ್ದೇನೆ ಎನ್ನುತ್ತಾರೆ. ಸದರಿ ಅಪೀಲಿನಲ್ಲಿ ತಾವು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ವಜಾ ಮಾಡಿರುತ್ತಾರೆ. ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಕಂದಾಯ ಪ್ರಾಧಿಕಾರದಲ್ಲಿ ಆದೇಶ ಆದ ನಂತರ ತಾವೇನಾದರೂ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ 69/2016 ಮಾಡಿದ್ದು ಸದರಿ ದಾವೆ ವಜಾ ಆಗಿದೆ ಎನ್ನುತ್ತಾರೆ. ಸದರಿ ಆದೇಶದ ಮೇಲೆ ವಾದಿಯು ಅಪೀಲು ಮಾಡಿದ್ದಾರೆ ಅಪೀಲು ಚಾಲ್ತಿಯಲ್ಲಿದೆ ಎನ್ನುತ್ತಾರೆ.

5. ಅಸಲು ದಾವೆ 69/2016 ವಾದಿಯೇ ಸ ನಂ.12/6ರ ಆಸ್ತಿಯ ಮಾಲೀಕ ಎಂದು ಘೋಷಣೆ ಮಾಡಿದ್ದು ಈ ವಿಚಾರ ಗೊತ್ತಿದ್ದರು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತಾವೇನಾದರೂ ಪ್ರತಿವಾದಿ 1 ರಿಂದ 4ರ ವಿರುದ್ಧ ದಾವೆ ಮಾಡಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ದಾವಾ ಆಸ್ತಿಗೂ ನನಗೂ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲದಿದ್ದರು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಮೇಲೆ ಹೇಳಿರುವಂತೆ ನನ್ನ ತಾತ ಸ ನಂ.12ರಲ್ಲಿ 6 ಎಕರೆ 33 ಗುಂಟೆ ಜಮೀನನ್ನು ಯಾರಿಂದಲೂ ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಯು ಸ್ವಾ ಧೀನ ಇರುವ ದಾವಾ ಆಸ್ತಿಯಲ್ಲಿ ನಾನು ಅಡಚಣೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ